ಬೇಕೋ ಅದನ್ನು ತೆಗೆದುಕೊಳ್ಳುತ್ತೇವೆಂದು ಹೇಳಬಲ್ಲೆ. ಆಮೇಲೆ ಫಾಲ್ಸ್ ಸರ್ಟಿಫಿಕೇಟ್ ಬಗ್ಗೆ ಸರ್ಕಾರ ಪ್ರಚೋದನೆ ಮಾಡುತ್ತದೆಂದು ಹೇಳಿದರು ಇದು ಜನತಾ ಸರ್ಕಾರದಲ್ಲೇನೂ ನಡೆದು ಬಂದಿಲ್ಲ, ಎಲ್ಲಾ ಸರ್ಕಾರದಲ್ಲೂ ಕೂಡ ಬಂದಿದೆ. ಇದರ ಬಗ್ಗೆ ಚರ್ಚೆ ಮಾಡೋಣ. ಸ್ವಾಮಿ ಇಷ್ಟು ಭರವಸೆ ಕೊಡಬಲ್ಲೆ. ಯಾರ್ಯಾರು ತಪ್ಪಿತಸ್ಥರು ಇದ್ದಾರೆ, ಅಂತಹವರ ಮೇಲೆ ಈಗಿರುವ ಕಾನೂನು ಚೌಕಟ್ಟಿನಲ್ಲಿ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ದಯಮಾಡಿ ನನಗೆ ಅವಕಾಶ ಕೊಡಬೇಕು...

ಶ್ರೀ ಬಿ. ಬಸವಲಿಂಗಪ್ಪ.—ಇದು ಸಾಮಾನ್ಯವಾದ ಪ್ರಶ್ನೆ ಅಲ್ಲ.....

ಉಪಾಧ್ಯಕ್ಷರು,—ಇದನ್ನು ಅರ್ಧ ಗಂಟೆ ಚರ್ಚೆಗೆ ಕಳುಹಿಸಿಕೊಡಿ...

ಒಬ್ಬ ಮಾನ್ಯ ಸದಸ್ಯರು.—ಅಂತರ್‌ಜಾತೀಯ ವಿವಾಹಗಳು ಬೇಕಾದಷ್ಟು ಆಗುತ್ತಿವೆ. ಇದರ ಬಗ್ಗೆ ಹೆಣ್ಣಿನ ಜಾತಿಗೆ ಸರ್ಟಿಫಿಕೇಟ್ ಕೊಡುತ್ತೀರೋ. ಗಂಡಿನ ಜಾತಿಗೆ ಸರ್ಟಿಫಿಕೇಟ್ ಕೊಡುತ್ತೀರೋ?.....

(ಗೊಂದಲ)

ಉಪಾಧ್ಯಕ್ಷರು.—ಈ ಪ್ರಶ್ನೆ ಇಲ್ಲಿಗೆ ಮುಗಿದಿದೆ. ಲಿಖಿತೇ ಕ್ರಮಸಂಖ್ಯೆಯ ಪ್ರಶ್ನೆಯನ್ನು ಮುಂದೂಡಿದೆ. ಈಗ ಲಿಖಿತೇ ಪ್ರಶ್ನೆ. (ಪ್ರಶ್ನೆ ೩೨೧)

ರಾಜ್ಯದಲ್ಲಿ ಪರಿಶಿಷ್ಟ ಪಂಗಡದವರ ಜನಸಂಖ್ಯೆ

೩೨೧. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೫೦ನೇ ಸಂವಿಧಾನ (ಪರಿಶಿಷ್ಟ ವರ್ಗ) ಆದೇಶವಂತೆ ರಾಜ್ಯದ ಪರಿಶಿಷ್ಟ ವರ್ಗದ ಜನಸಂಖ್ಯೆ ಹಾಗೂ ೧೯೬೧, ೧೯೭೧ ಮತ್ತು ೧೯೮೧ನೇ ಜನಗಣತಿ ಪ್ರಕಾರ ಪರಿಶಿಷ್ಟ ವರ್ಗದ ಜನಸಂಖ್ಯೆ

ಆ) ೧೯೬೧ ಮತ್ತು ೧೯೭೧ನೇ ಜನಗಣತಿ ಪ್ರಕಾರ ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ಪರಿಶಿಷ್ಟ ವರ್ಗದ ಜನರು ನೆಲೆಸಿರುತ್ತಾರೆ ಮತ್ತು ೧೯೮೧ನೇ ಜನಗಣತಿ ಪ್ರಕಾರ ಎಲ್ಲೆಲ್ಲಿ ನೆಲೆಸಿರುತ್ತಾರೆ

ಇ) ೧೯೬೧ ಮತ್ತು ೧೯೭೧ನೇ ಜನಗಣತಿ ಜನಸಂಖ್ಯೆಗೂ ಮತ್ತು ೧೯೮೧ನೇ ಜನಗಣತಿ ಜನಸಂಖ್ಯೆಗೂ ಹೋಲಿಸಿದರೆ ರಾಜ್ಯದ ಪರಿಶಿಷ್ಟ ವರ್ಗ ಜನಸಂಖ್ಯೆ ಹೆಚ್ಚಾಗಿದೆಯೇ ? ಹಾಗಿದ್ದಲ್ಲಿ ಕಾರಣಗಳೇನು ?

ಈ) ಪರಿಶಿಷ್ಟ ವರ್ಗಗಳಿಗೆ ದೊರೆಯುವ ಸೌಲಭ್ಯಗಳನ್ನು ಪಡೆಯುವ ದೃಷ್ಟಿಯಿಂದ ಹಿಂದುಳಿದ ವರ್ಗಗಳಿಗೆ ಸೇರಿದ ಕೆಲವು ಜಾತಿಗಳವರು ೧೯೮೧ರ ಜನಗಣತಿಯಲ್ಲಿ ತಾವು ಪರಿಶಿಷ್ಟ ವರ್ಗದವರೆಂದು ನಮೂದಿಸಲು ಪ್ರಯತ್ನಿಸಿರುವರೆ ?

ಉ) ಸರ್ಕಾರವು ಈ ಜಾತಿಗಳ ತಪ್ಪು ಪ್ರಯತ್ನದ ಬಗ್ಗೆ ಗಮನ ಕೊಡಬಾರದೆಂದು ಉದ್ದೇಶಿಸಿರುವರೇ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ಪರಿಶಿಷ್ಟ ವರ್ಗದ ಜನಸಂಖ್ಯೆ ಕೆಳಕಂಡಂತೆ ಇದೆ.

ಜನಗಣತಿ ವರ್ಷ	ಜನಸಂಖ್ಯೆ
೧೯೬೧	೧,೯೨,೦೯೬
೧೯೭೧	೨,೩೧,೨೬೮
೧೯೮೧	೧೮,೨೫,೨೦೩

ಆ) ಪರಿಶಿಷ್ಟ ವರ್ಗದ ಜನರು ರಾಜ್ಯದ ಎಲ್ಲೆಡೆಯಲ್ಲೂ ಇದ್ದಾರೆ.

ಇ) ಹೌದು, ಇದಕ್ಕೆ ಕೆಲವು ಬುಡಕಟ್ಟುಗಳ ಬಗ್ಗೆ ಕ್ಷೇತ್ರ ನಿರ್ಬಂಧ ತೆಗೆದುಹಾಕಿರುವುದು ಕಾರಣ ವಿರಬಹುದು.

ಈ) ಇದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಉ) ಉದ್ಭವಿಸುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—೧೯೬೧, ೧೯೭೧, ೧೯೮೧ ಈ ರಾಜ್ಯಕ್ಕೆ ಸಂಬಂಧಪಟ್ಟ ಜನಸಂಖ್ಯೆ. ೧೯೬೧ ನೇ ಇಸವಿಯಲ್ಲಿ ೧,೯೨,೦೯೬ ಜನ ಇದ್ದಾರೆ. ೧೯೭೧ ರಲ್ಲಿ ೨,೩೧,೨೬೮ ಜನ ಇದ್ದಾರೆ. ಇದು ಸ್ವಾಭಾವಿಕ. ೧೯೮೧ ನೇ ಇಸವಿಯಲ್ಲಿ ೧೮ ಲಕ್ಷಕ್ಕೆ ಹೋಗಿದ್ದಾರೆ. ಪರಿಶಿಷ್ಟವರ್ಗದ ಜನರು ರಾಜ್ಯದ ಎಲ್ಲೆಡೆಯಲ್ಲೂ ಇದ್ದಾರೆ ಎಂದು ವಿಶೇಷವಾಗಿ ಹೇಳುತ್ತಿದ್ದಾರೆ. ಆಗಲೂ ಕೂಡ ರಾಜ್ಯದ ಎಲ್ಲೆಡೆಯಲ್ಲೂ ಇದ್ದರು. ಈಗ್ಗೆ ೧೦ ವರ್ಷದಲ್ಲಿ ಸುಮಾರು ೧೬ ಲಕ್ಷ ಜನರು ಹೆಚ್ಚಾಗುವುದಕ್ಕೆ ಕಾರಣ ಹೇಳಿಲ್ಲ. ನೀವು ಹೇಳಿರತಕ್ಕ ಕಾರಣ ರಾಜ್ಯದ ಎಲ್ಲಾ ಕಡೆಯಲ್ಲೂ ಇದ್ದಾರೆಂದು ಹೇಳುತ್ತೀರಿ. ಈ ರೀತಿ ಆಗಲೂ ಇದ್ದರು, ಈಗಲೂ ಇದ್ದಾರೆ. ಇದಕ್ಕೆ ಸರಿಯಾದ ಕಾರಣ ಹೇಳಿ.

ಶ್ರೀ ವಿ. ಎಲ್. ಪಾಟೀಲ್.— ಮಾನ್ಯ ಅಧ್ಯಕ್ಷರೇ, ೧೯೭೭ನೇ ಇಸವಿ ಜುಲೈ ೨೭ ರಿಂದ ಜಾರಿಗೆ ಬಂದ, ೧೯೭೬ನೇ ಇಸವಿಯ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗಗಳ ತಿದ್ದುಪಡಿ ಕಾಯಿದೆ, ಪರಿಶಿಷ್ಟ ವರ್ಗದ ಪರಿಮಿತಿಯನ್ನು ತೆಗೆಯಲಾಗಿದೆ. ಇದು ಪರ್ಮಿಷ್ಯಲರ್ ಆಗಿ ಪರಿಶಿಷ್ಟವರ್ಗ, ಪರಿಶಿಷ್ಟಜಾತಿ ಯವರು ಈ ಏರಿಯಾದಲ್ಲೇ ಇರುತ್ತಾರೆಂದು ಇತ್ತು. ೧೯೭೬ ರಲ್ಲಿ ಇದನ್ನು ತೆಗೆಯಲಾಗಿದೆ. ಆದ್ದರಿಂದ ರಾಜ್ಯದ ಎಲ್ಲಾ ಕಡೆಯಲ್ಲೂ ಹೆಚ್ಚಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ಇದು ವಾಸ್ತವಿಕತೆಗೆ ದೂರವಾದುದು. ಬಂದೆರಡು ಜಿಲ್ಲೆಯ ಅಂಕಿ ಅಂಶಗಳನ್ನು ಮಾತ್ರ ಹೇಳುತ್ತೇನೆ. ಇದು ೧೯೭೧ ನೇ ಇಸವಿಯ ಜನಗಣತಿ ಪ್ರಕಾರ. ಪೇಜ್ ೩೩೦, ಇದರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ೪,೨೪೬ ಜನರು ಇದ್ದರು. ೧೦ ವರ್ಷದಲ್ಲಿ ಎರಡೂವರೆ ಲಕ್ಷ ಹೇಗಾದರು ? ಎಲ್ಲರೂ ಪ್ರವಾಸ ಮಾಡುತ್ತಾ ಇಲ್ಲ. ಇದರ ಮಿತಿ ತೆಗೆದುಹಾಕಿದರೂ ಕೂಡ ಎರಡೂವರೆ ಲಕ್ಷ ಆಗುವುದಿಲ್ಲ. ಬೀದರ್ ಜಿಲ್ಲೆಯಲ್ಲಿ, ೧೯೭೧ ರ ಜನಗಣತಿ ಪ್ರಕಾರ ೬೯೯ ಜನ ಇದ್ದರು. ಈಗ ಒಂದು ಲಕ್ಷ ಆಗಿದ್ದಾರೆ. ಹೇಗಾದರು ? ಚಿತ್ರದುರ್ಗ ಜಿಲ್ಲೆಯಲ್ಲಿ ೭೬೨ ಜನ ಮಾತ್ರ ಇದ್ದರು. ಈಗ ಎರಡೂ ಮುಕ್ಕಾಲು ಲಕ್ಷ ಆಗಿದ್ದಾರೆ, ಹೇಗಾದರು ? ಎಲ್ಲಿಂದ ಬಾವರು ? ಈಗ ನಾನು ತಮ್ಮನ್ನು ಕೇಳುತ್ತಿದ್ದೇವೆ. ನಿಮ್ಮ ಹತ್ತಿರ ಪುಸ್ತಕ ಇದೆಯೋ ಇಲ್ಲವೋ ಗೊತ್ತಿಲ್ಲ. ಬೇಕಾದರೆ ನಾನು ಪುಸ್ತಕ ಕೊಡುತ್ತೇನೆ. ಗುಲ್ಬರ್ಗಾಜಿಲ್ಲೆಯಲ್ಲಿ ೧೯೭೧ ರಲ್ಲಿ, ೧೮೭೧ ಜನ ಮಾತ್ರ ಇದ್ದರು, ಇವತ್ತು ಎರಡೂವರೆ ಲಕ್ಷ ಜನ ಆಗಿದ್ದಾರೆ ಹಾಸನ ಜಿಲ್ಲೆಯಲ್ಲಿ ೧೬೬೯ ಜನ ಇದ್ದರು, ಈಗ ಸುಮಾರು ೭೦ ಸಾವಿರ ಜನ ಆಗಿದ್ದಾರೆ. ರಾಯಚೂರು ಜಿಲ್ಲೆಯಲ್ಲಿ ೧೧೪೮ ಜನ ಇದ್ದರು, ಇವತ್ತಿನ ದಿವಸ ೨ ಲಕ್ಷ ಹತ್ತಿರ, ಹತ್ತಿರ ಬಂದಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ೨೮೦ ಜನ ಟ್ರೈಬಲ್ಸ್ ಇದ್ದವರು ಈಗ ೨ ಲಕ್ಷದ ೬೦ ಸಾವಿರ ಜನ ಆಗಿದ್ದಾರೆ. ಇವರೆಲ್ಲ ಎಲ್ಲಿಂದ ಬಂದವರು ? ಕೆಲವು ಜಾತಿಯ ಜನರು ಈ ಟ್ರೈಬಲ್ಸ್ ಸರ್ಟಿಫಿಕೇಟ್ ಪಡೆದುಕೊಂಡ ಟ್ರೈಬಲ್ಸ್‌ನವರಿಗೆ ಸಿಗತಕ್ಕಂಥ ಎಲ್ಲಾ ಸೌಲಭ್ಯಗಳನ್ನು ಕಿತ್ತುಕೊಳ್ಳುವುದಕ್ಕೆ ಮಾಡಿರತಕ್ಕಂಥ ಪ್ರಯತ್ನ ಇದು. ಈ ರೀತಿಯ ವೇರಿಯೇಷನ್ ಜನಗಣತಿಯಿಂದ ಆದುದ್ದು ಎಂದು

ತಾವು ಪ್ರಚಾರ ಮಾಡುತ್ತಿದ್ದೀರಿ. ಇದು ಸರಿಯೇ ? ಈ ರೀತಿಯ ವೇರಿಯೇಷನ್ ಹೇಗೆ ಆಯಿತು ? ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು ?

ಶ್ರೀ ವಿ. ಎಲ್. ಪಾಟೀಲ್.—ಎಸ್.ಸಿ. ಮತ್ತು ಎಸ್.ಟಿ. ಎಂದು ಎಲ್ಲಾ ರಾಜ್ಯಗಳಲ್ಲಿ ಇದ್ದಾರೆ. ಆದರೆ ಟ್ರೈಬಲ್ಸ್‌ನಲ್ಲಿ ವಾಲ್ಮೀಕಿ, ನೇಡ, ಬೇಡರ್, ನಾಯಕ, ನಾಯಕ್ ಕುರುಬ, ಕಾಡು ಕುರುಬ, ಜೇನು ಕುರುಬ ಇತ್ಯಾದಿ ಪಂಗಡಗಳು ಟ್ರೈಬಲ್ಸ್‌ನಲ್ಲಿ ಬರುತ್ತವೆ. ಇದರ ಜೊತೆಗೆ ಮಾಲೆಯರು ಸಹ ಟ್ರೈಬಲ್ಸ್‌ನಲ್ಲಿ ಬರುತ್ತಾರೆ. ಈ ಜನರೆಲ್ಲಾ ಎಸ್. ಟಿ. ಎಂದು ಸರ್ಟಿಫಿಕೇಟ್‌ನ್ನು ಪಡೆದು ಕೊಂಡಿರುವುದರಿಂದ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಜನಸಂಖ್ಯೆ ಬೆಳೆದಿದೆ ಎಂದು ನನ್ನ ಅಭಿಪ್ರಾಯ. ಹಿಂದೆ ಜನಗಣತಿ ಮಾಡುವಾಗ ಈ ಪಂಗಡಗಳೆಲ್ಲಾ ಟ್ರೈಬಲ್ಸ್‌ನಲ್ಲಿ ಬಂದುಬಿಟ್ಟಿದ್ದಾರೆ. ಆದ್ದರಿಂದಲೇ ಇದನ್ನೆಲ್ಲಾ ಪರಿಶೀಲನೆ ಮಾಡುವ ಸಲುವಾಗಿ ನಾವು ಒಂದು ಕಮಿಟಿಯನ್ನು ನೇಮಕ ಮಾಡಿದ್ದೇವೆ. ಆ ಕಮಿಟಿಯಲ್ಲಿ ವಿರೋಧಪಕ್ಷದವರು ಸಹ ಇದ್ದಾರೆ. ಅವರು ಈ ಎಲ್ಲಾ ವಿಚಾರಗಳನ್ನು ಪರಿಶೀಲನೆ ಮಾಡಿ ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟ ಮೇಲೆ ಆ ವರದಿಯನ್ನು ನಾನು ಕ್ಯಾಬಿನೆಟ್‌ನಲ್ಲಿ ಇಟ್ಟು ಒಂದು ತೀರ್ಮಾನ ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ. ಜೊತೆಗೆ ಈಗಾಗಲೇ ನಾವು ಕ್ಯಾಬಿನೆಟ್‌ನಲ್ಲಿ ಒಂದು ತೀರ್ಮಾನ ತೆಗೆದುಕೊಂಡು ಈ ನಾಯಕ, ನಾಯಕ ಬೇಡ, ಬೇಡರ್, ವಾಲ್ಮೀಕಿ ಕಾಡು ಕುರುಬ ಜೇನು ಕುರುಬ ಇವರೆಲ್ಲಾ ಒಂದೇ ಎಂದು ತೀರ್ಮಾನ ಮಾಡಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದೇವೆ. ಆ ಶಿಫಾರಸ್ಸು ಅನ್ನು ಕೇಂದ್ರ ಸರ್ಕಾರ ಮಾನ್ಯತೆ ಮಾಡಬೇಕಾಗಿದೆ.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ.—ಈಗ ತಾವು ಹೇಳಿದಂಥ ವಾದವನ್ನು ಒಪ್ಪಿಕೊಂಡರು ಸಹ ವಿರಿಯಾ ರಿಸ್ಟ್ರಿಕ್ಷನ್ ಬಂದ ಮೇಲೆ ಸ್ವಲ್ಪ ಟ್ರೈಬಲ್ಸ್ ಜನಸಂಖ್ಯೆ ಜಾಸ್ತಿಯಾಗಿದೆ. ಈ ಜನ ಸಂಖ್ಯೆ ಎಲ್ಲಿ ಹೆಚ್ಚಾಗಬೇಕಾಗಿತ್ತು ಎಂದರೆ ಧಾರವಾಡ, ಬೆಳಗಾಂ, ಗುಲ್ಬರ್ಗ ಮತ್ತು ರಾಯಚೂರು ಈ ಕಡೆಗಳಲ್ಲಿ ಜಾಸ್ತಿಯಾಗಬೇಕಾಗಿತ್ತು. ಈ ಸರ್ಕಾರಿ ಆದೇಶ ಇದ್ದುದ್ದು ಹಳೇ ಮೈಸೂರು ಭಾಗದಲ್ಲಿ. ಆದರೆ ತುಮಕೂರು, ಚಿಕ್ಕಮಗಳೂರು, ಹಾಸನ, ಮೈಸೂರು ಈ ಕಡೆಗಳಲ್ಲಿ ಕೂಡ ಟ್ರೈಬಲ್ಸ್ ಜನ ಸಂಖ್ಯೆ ಜಾಸ್ತಿಯಾಗಿದೆಯಲ್ಲಾ. ಇದಕ್ಕೆ ತಾವೇನು ಮಾಡುತ್ತೀರಿ ? ಹೊಸ ಮೈಸೂರು ಭಾಗದಲ್ಲಿ ಈ ಆಜ್ಞೆ ಇರಲಿಲ್ಲವೆಂದರೂ ಕೂಡ ಅವರಿಗೂ ಕೂಡ ಇದು ಅಪ್ಲಿಕೆಬಲ್ ಆಗಿದೆ. ಇದಕ್ಕೇನು ಮಾಡುತ್ತೀರಿ? ೧೯೭೧ ನೇ ಇಸವಿಯಲ್ಲಿ ಇದ್ದಂತಹ ಟ್ರೈಬಲ್ಸ್‌ನವರು ಈಗ ಸುಮಾರು ೨೦–೩೦ ಪಟ್ಟು ಜಾಸ್ತಿಯಾಗಿದ್ದಾರೆ. ಕೆಲವೇ ಕೆಲವು ಜನ ಈ ಟ್ರೈಬಲ್ಸ್‌ನವರಿಗೆ ಸಿಗತಕ್ಕಂಥ ಸೌಲಭ್ಯಗಳನ್ನು ಕಸಿದುಕೊಳ್ಳುವುದಕ್ಕೆ ಕೆಲವು ಜಾತಿಗಳನ್ನು ಟ್ರೈಬಲ್ಸ್‌ನಲ್ಲಿ ನೊಂದಾಯಿಸಿಕೊಂಡಿದ್ದಾರೆ. ಆದ್ದರಿಂದ ಈಗ ಈ ಜನರಿಗೆ ತಾವು ಯಾವ ರೀತಿಯಲ್ಲಿ ಪರಿಹಾರ ಕೊಟ್ಟು ರಕ್ಷಣೆ ಮಾಡುತ್ತೀರಿ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ವಿ. ಎಲ್. ಪಾಟೀಲ್.—ಈಗ ನಾನು ಮೊದಲೇ ಹೇಳಿದ ಹಾಗೆ ವಾಲ್ಮೀಕಿ, ಬೇಡ, ಬೇಡರ್ ನಾಯಕ, ನಾಯಕ್ ಮಾಲೆಯರು ಇವರೆಲ್ಲಾ ಒಂದೇ ಜಾತಿಯವರು. ಇವರೆಲ್ಲಾ ಟ್ರೈಬಲ್ಸ್‌ನಲ್ಲಿ ಬರುತ್ತಾರೆ. ಆದ್ದರಿಂದ ಎಸ್.ಟಿ. ಸರ್ಟಿಫಿಕೇಟ್ ಮಾಡಿಸಿ ಇಷ್ಟೊಂದು ಜನ ಸಂಖ್ಯೆ ಬೆಳೆದಿರಬಹುದು. ಎಸ್. ಟಿ. ಯಲ್ಲಿ ಯಾರು ಬರುತ್ತಾರೆ, ಯಾರು ಯೋಗ್ಯರು ಯಾರು ಎಸ್.ಟಿ. ಯಲ್ಲಿ ಬರುವುದಕ್ಕೆ ಅಯೋಗ್ಯರು ಎನ್ನುವುದನ್ನು ಗುರುತು ಮಾಡಲು ನಾವು ಈಗ ಒಂದು ಕಮಿಟಿಯನ್ನು ನೇಮಕ ಮಾಡಿದ್ದೇವೆ. ಅವರು ವರದಿಯನ್ನು ಕೊಟ್ಟ ಮೇಲೆ ಅದನ್ನು ಕ್ಯಾಬಿನೇಟ್‌ನಲ್ಲಿ ಇಟ್ಟು ನಿರ್ಣಯ ತೆಗೆದು ಕೊಂಡು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಂಡುತ್ತೇವೆ. ಕೇಂದ್ರ ಸರ್ಕಾರದವರು ಅದನ್ನು ಮಾನ್ಯತೆ ಮಾಡಿದರೆ ಅದು ಇಂಪ್ಲಿಮೆಂಟ್ ಆಗುತ್ತದೆ. ಇಲ್ಲದಿದ್ದರೆ ಇಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಅಧ್ಯಕ್ಷರೇ ಈಗ...

ಉಪಾಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ಇದುವರೆವಿಗೂ ಎರಡೇ ಎರಡು ಪ್ರಶ್ನೆಗಳು ಮಾತ್ರ ಉಳಿದಿವೆ. ಒಂದೇ ಪ್ರಶ್ನೆಯಲ್ಲಿ ಎಷ್ಟು ಉಪ ಪ್ರಶ್ನೆಗಳನ್ನು ಕೇಳುವುದಾದರೆ ಸಮಯ ಆಗುವುದು. ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ.—ತಾವು ಈಗ ಕಮಿಟಿಯನ್ನು ಮಾಡಿದ್ದೀರಿ. ರಾಜ್ಯಾಂಗದ ನಿಯಮ ೩೪೧ (೨) ರ ಪ್ರಕಾರ ಸರ್ಕಾರ ಕಮಿಟಿಯನ್ನು ನೇಮಕ ಮಾಡುವುದಕ್ಕೆ ಅಧಿಕಾರ ಇಲ್ಲ. ರಾಜ್ಯ

ಸರ್ಕಾರಕ್ಕೂ ಇಲ್ಲ, ಕೇಂದ್ರ ಸರ್ಕಾರಕ್ಕೂ ಕೂಡ ಕಮಿಟಿಯನ್ನು ನೇಮಕ ಮಾಡುವುದಕ್ಕೆ ಅಧಿಕಾರ ಇಲ್ಲ. ಈ ರೀತಿ ಇರುವಾಗ ತಾವು ಕಮಿಟಿಯನ್ನು ನೇಮಕ ಮಾಡಿದ್ದೀರಿ. ನೀವು ಈಗ ರಾಜ್ಯಾಂಗಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದೀರಿ. ತಾವು ಮಂತ್ರಿಗಳಾಗಿ ಪ್ರಮಾಣವಚನ ಸ್ವೀಕಾರ ಮಾಡುವಾಗ ರಾಜ್ಯಾಂಗಕ್ಕೆ ಲಾಯಲ್ ಆಗಿರುತ್ತೇನೆಂದು ಹೇಳಿ ಈಗ ರಾಜ್ಯಾಂಗಕ್ಕೆ ವಿರುದ್ಧವಾಗಿ ಹೋಗುತ್ತಿದ್ದೀರಿ ಇದು ಸರಿಯೇ ?

ಶ್ರೀ ಹೆಚ್. ಡಿ. ದೇವೇಗೌಡ.—ಈಗ ಇದರಲ್ಲಿ ಎರಡು ಭಾಗ ಆಡಕವಾಗಿದೆ. ೧೯೭೧, ೧೯೭೧ ವಂತ್ತು ೧೯೮೧ನೇ ಸಾಲಿನಲ್ಲಿ ಆದಂಥ ಸೆನ್ಸ್‌ಸ್‌ನಿಂದ ಹೆಚ್ಚು ವೇರಿಯೇಷನ್ ಆಗಿದೆ ಎನ್ನುವುದೇ ತಮ್ಮ ಮೂಲಭೂತವಾದ ಪ್ರಶ್ನೆ. ಶ್ರೀಮಾನ್ ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ಈ ಬಗ್ಗೆ ಕೆಲವು ತೊಡಕುಗಳು ಬಂದವು. ಆದರೆ ಸೆನ್ಸ್‌ಸ್ ಮಾಡತಕ್ಕಂಥ ಅಧಿಕಾರಿಗಳು, ಮತ್ತು ಆದರ ಹೊಣೆ ಹೊತ್ತುಕೊಳ್ಳುವವರು ಕೇಂದ್ರ ಸರ್ಕಾರದವರು. ಆ ಕೆಲಸ ರಾಜ್ಯ ಸರ್ಕಾರದ್ದು ಅಲ್ಲ ಆದರೆ ನಮ್ಮ ರಾಜ್ಯ ಸರ್ಕಾರದ ಅಧಿಕಾರಿಗಳು ಈ ಕೆಲಸಕ್ಕೆ ನೆರವಾಗುತ್ತಾರೆ ಅಷ್ಟೇ. ಅಧಿಕಾರಿಗಳು ಸೆನ್ಸ್‌ಸ್ ಮಾಡುವಂತಹ ಕಾಲದಲ್ಲಿ ಕೆಲವು ವರ್ಗದ ಜನರು ಈ ಟ್ರೈಬಲ್ಸ್‌ನವರಿಗೆ ಇರತಕ್ಕಂಥ ಸೌಲಭ್ಯಗಳನ್ನು ಪಡೆದುಕೊಳ್ಳಲು ಈ ಒಂದು ಸಂದರ್ಭವನ್ನು ದುರುಪಯೋಗ ಮಾಡಿಕೊಂಡು ಸೇರಿಕೊಂಡಿರತಕ್ಕಂಥ ಕೆಲಸ ಕೂಡ ನಡೆದಿದೆ. ಆದರೆ ಈ ವಿಚಾರ ಕೇಂದ್ರ ಸರ್ಕಾರದ ಗಮನಕ್ಕೆ ಬಂದಿಲ್ಲ. ಅವರು ಸಹ ಈ ಬಗ್ಗೆ ಈಗ ಯೋಚನೆ ಮಾಡುತ್ತಿದ್ದಾರೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಈ ಜನಸಂಖ್ಯೆ ಯಾವ ರೀತಿಯಲ್ಲಿ ಬೆಳೆಯಿತು ? ಇದಕ್ಕೆ ಕಾರಣವೇನು ? ಎನ್ನುವುದನ್ನು ಯೋಚನೆ ಮಾಡಿ ಒಂದು ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡುವ ಹಂತದಲ್ಲಿ ಇದ್ದಾರೆ. ಅವರಿಗೂ ಸಹ ಈ ಸೆನ್ಸ್‌ಸ್ ಫಿಗರ್ಸ್ ನೋಡಿ ಸಂಶಯ ಬಂದಿದೆ. ಆದ್ದರಿಂದ ಪುನರ್‌ಪರಿಶೀಲನೆ ಮಾಡುವ ಹಂತದಲ್ಲಿ ಇದ್ದಾರೆ. ಎರಡನೇಯದಾಗಿ ಈಗ ಕೆಲವು ಜಾತಿಗಳು ಈ ಟ್ರೈಬಲ್ಸ್‌ನಲ್ಲಿ ಸೇರಿಸಬೇಕೆಂದು ರಾಜ್ಯ ಸರ್ಕಾರ ಈ ಹಿಂದೆಯೇ ತಮ್ಮ ಶಿಫಾರಸ್ಸುಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದಾರೆ. ಈ ಬಗ್ಗೆ ಕೇಂದ್ರ ಸರ್ಕಾರದವರು ಕೆಲವು ತಕರಾರುಗಳನ್ನು ಎತ್ತಿ ಅದಕ್ಕೆ ಉತ್ತರವನ್ನು ರಾಜ್ಯ ಸರ್ಕಾರದಿಂದ ಕೇಳಿತ್ತು. ಅದಕ್ಕೆ ರಾಜ್ಯ ಸರ್ಕಾರ ಉತ್ತರವನ್ನು ಸಹ ಕೊಟ್ಟಿದೆ ಇದರಲ್ಲಿ ಸುಮಾರು ೩ ಉಪ ಜಾತಿಗಳನ್ನು ಸೇರಿಸಬೇಕೆಂದು ರಾಜ್ಯ ಸರ್ಕಾರ ಶಿಫಾರಸ್ಸು ಮಾಡಿದೆ. ನಮ್ಮ ಶಿಫಾರಸ್ಸು ಅನ್ನು ಪಾರ್ಲಿಮೆಂಟ್‌ನಲ್ಲಿ ಇಟ್ಟು ಚರ್ಚೆ ಮಾಡಬೇಕಾಗುತ್ತದೆಂದು ಕೆಲವು ಜನರು ಹೇಳುತ್ತಾರೆ. ಮತ್ತೆ ಕೆಲವರು ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಗಬೇಕಾಗಿಲ್ಲ ವೆಂದು ಹೇಳುತ್ತಾರೆ. ಅದು ಏನೇ ಆದರೂ ಸಹ ಅಂತಿಮವಾಗಿ ಕೇಂದ್ರ ಸರ್ಕಾರ ಮಾನ್ಯತೆ ಮಾಡಿ ಒಂದು ನಿರ್ಣಯವನ್ನು ಕೊಡುವ ತನಕ ನಮ್ಮ ಶಿಫಾರಸ್ಸುಗಳು ಮಾನ್ಯತೆ ಪಡೆಯುವುದಕ್ಕೆ ಸಾಧ್ಯವಿಲ್ಲ.

ಹುಕ್ಕೇರಿ ತಾಲ್ಲೂಕಿನ ಕೆರೆಗಳು

೩೭೧. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,—

ಅ) ಹುಕ್ಕೇರಿ ತಾಲ್ಲೂಕಿನಲ್ಲಿ ೧೯೮೧ರ ನಂತರ ಎಷ್ಟು ಕೆರೆಗಳು ಕಾರ್ಯವು ಪ್ರಾರಂಭವಾಗಿರುತ್ತದೆ. ಮಂಜೂರಾದ ದಿನಾಂಕ, ಪ್ರಾರಂಭವಾದ ದಿನಾಂಕ ಹಾಗೂ ಸ್ಥಳಗಳ ಹೆಸರುಗಳನ್ನು ನಮೂದಿಸುವುದು.

ಆ) ಹರಿಗಾವುರ ಕೆರೆ, ರಾಶಿಂಗ್ ಕೆರೆ ಮಂಜೂರಾಗಿದ್ದುದು ನಿಜವೇ?

ಇ) ಬೋರಗಲ್ಲ ಕೆರೆಯ ಕೆಲಸವನ್ನು ಪ್ರಾರಂಭಿಸುವುದಕ್ಕಾಗಿ ತಡವಾಗುತ್ತಿರುವುದಕ್ಕೆ ಕಾರಣವೇನು?

ಈ) ಅಂಕಲೆ, ಬಾಡವಾಡಿ, ಮಸರಗುಪ್ಪಿ ಕೆರೆಗಳ ಕೆಲಸವು ಪ್ರಾರಂಭವಾದದ್ದು ಯಾವಾಗ?